# ಹಾಕಿ ಅಂಗಳದ ‘ಮ್ಯಾಜಿಕ್’ ಹುಡುಗಿ

■ ಗಿರೀಶ ದೊಡ್ಡಮನಿ




ಹದಿಮೂರು ವರ್ಷಗಳ ಹಿಂದಿನ ಮಾತು. ಕುಸ್ತಿಪಟುವಾಗಿದ್ದ ಅಣ್ಣನೊಂದಿಗೆ ಅಖಾಡಾಕ್ಕೆ ಹೋಗುತ್ತಿದ್ದ ಆ ಬಾಲಕಿ ತಾನೂ ‘ಒಲಿಂಪಿಯನ್ ಪೈಲ್ವಾನ್’ ಆಗುವ ಕನಸು ಕಾಣುತ್ತಿದ್ದಳು. ತನ್ನ ವಯಸ್ಸಿನ ಸಹಪಾಠಿಗಳೊಂದಿಗೆ ಕುಸ್ತಿಪಟ್ಟುಗಳನ್ನು ಹಾಕುತ್ತ, ದೇಹ ಹುರಿಗೊಳಿಸಿಕೊಳ್ಳುವ ಕಸರತ್ತುಗಳನ್ನು ಮಾಡುತ್ತಿದ್ದಳು.

ಅದೊಂದು ದಿನ ಕುಸ್ತಿ ತಾಲೀಮು ಮುಗಿಸಿ ಅಣ್ಣನ ಕೈಹಿಡಿದು ಮನೆಯತ್ತ ನಡೆದ ಆ ಹುಡುಗಿಗೆ ಕ್ರೀಡಾಂಗಣದ ಮೂಲೆಯೊಂದರಲ್ಲಿ ಬಿದ್ದಿದ್ದ ಹಾಕಿ ಸ್ಟಿಕ್ ಗಮನ ಸೆಳೆಯಿತು. ಸುಮ್ಮನೆ ಕೈಗೆತ್ತಿಕೊಂಡು ಮೋಜಿಗಾಗಿ ಅದನ್ನು ಬಳಸಲು ಶುರು ಮಾಡಿದಳು. ದಿನಗಳೆದಂತೆ ಕುಸ್ತಿ ಮೇಲಿನ ಪ್ರೀತಿ ಕಡಿಮೆಯಾಗಿ ಹಾಕಿ ಆಟದತ್ತಲೇ ಒಲವು ಬೆಳೆಯತೊಡಗಿತು. ಕ್ರೀಡಾಪಟುವಾಗಿದ್ದ ಅಪ್ಪ ತಮ್ಮ ಮಗಳ ಆಸೆಗೆ ಅಡ್ಡಿಯಾಗಲಿಲ್ಲ. ಅದೇ ಹುಡುಗಿ ದೀಪಿಕಾ ಸೆಹ್ರಾವತ್ ಇದೀಗ ‘ಪಾಲಿಗ್ರಾಸ್ ಮ್ಯಾಜಿಕ್ ಸ್ಕಿಲ್’ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.

ಭಾರತ ಮಹಿಳಾ ಹಾಕಿ ತಂಡದ ಫಾರ್ವರ್ಡ್ ಆಟಗಾರ್ತಿಯಾಗಿರುವ 21 ವರ್ಷದ ದೀಪಿಕಾ ಭುವನೇಶ್ವರದಲ್ಲಿ ನಡೆದಿದ್ದ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯ ಪಂದ್ಯದಲ್ಲಿ ಹೊಡೆದಿದ್ದ ‘ಚಮತ್ಕಾರ ಸದೃಶ’ ಗೋಲು ಪ್ರಶಸ್ತಿ ಗೌರವಕ್ಕೆ ಪಾತ್ರವಾಗಿದೆ.

ವಿಶ್ವದ ಅಗ್ರಮಾನ್ಯ ತಂಡವಾದ ನೆದರ್ಲೆಂಡ್ಸ್ ವಿರುದ್ಧದ ಆ ಪಂದ್ಯದಲ್ಲಿ, ದೀಪಿಕಾ 35ನೇ ನಿಮಿಷದಲ್ಲಿ ಹೊಡೆದಿದ್ದ ಗೋಲು ನಿಜಕ್ಕೂ ಮ್ಯಾಜಿಕ್ ಎಂಬಂತೆ ದಾಖಲಾಗಿತ್ತು.

ದೀಪಿಕಾ ಅವರು ಏಕಾಂಗಿಯಾಗಿ ಎಡಗಡೆಯಿಂದ ಮುನ್ನುಗ್ಗಿ ಚೆಂಡನ್ನು ಡ್ರಿಬಲ್ ಮಾಡುತ್ತ ತಮ್ಮನ್ನು ಸುತ್ತುವರಿದಿದ್ದ ಎದುರಾಳಿ ಡಿಫೆಂಡರ್‌ಗಳನ್ನು ತಪ್ಪಿಸಿಕೊಂಡು, ಗೋಲ್ ಕೀಪರ್ ಊಹೆಯನ್ನೂ ಮೀರಿ ಗೋಲು ಗಳಿಸಿದ್ದರು. ಇದಕ್ಕೂ ಮುನ್ನ ಭಾರತ ತಂಡವು ಆ ಪಂದ್ಯದಲ್ಲಿ 0–2 ಹಿನ್ನಡೆಯಲ್ಲಿತ್ತು. ಆ ಗೋಲಿನಿಂದ ಭಾರತ ಚೇತರಿಸಿಕೊಂಡಿತ್ತು. ನಂತರ 2–2 ಗೋಲುಗಳ ಸಮಬಲವನ್ನೂ ಸಾಧಿಸಿತ್ತು. ಆದರೆ ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ಗೆದ್ದಿತ್ತು.

ಪಾಲಿಗ್ರಾಸ್ ಸ್ಪರ್ಧೆಯಲ್ಲಿ ದೀಪಿಕಾ ಅವರಿಗೆ ಬಹಳ ಕಠಿಣ ಪೈಪೋಟಿ ಇತ್ತು. ಸ್ಪೇನ್ ದೇಶದ ಪೆಟ್ರಿಶಿಯಾ ಅಲ್ವಾರೇಝ್ ಮತ್ತು ಆಸ್ಟ್ರೇಲಿಯಾದ ಮಹಿಳಾ ತಂಡವು ಗಳಿಸಿದ್ದ ಗೋಲುಗಳ ನಿಕಟ ಪೈಪೋಟಿಯನ್ನು ಮೀರಿ ದೀಪಿಕಾ ಪ್ರಶಸ್ತಿ ಗೆದ್ದರು.

ಹರಿಯಾಣದ ಹಿಸಾರ್‌ನ ದೀಪಿಕಾ ಈಗ ಭಾರತ ತಂಡದ ಪ್ರಮುಖ ಆಟಗಾರ್ತಿಯಾಗಿದ್ದಾರೆ. ಡ್ರ್ಯಾಗ್ ಮತ್ತು ಫ್ಲಿಕ್ ಪರಿಣತ ಆಟಗಾರ್ತಿಯಾಗಿರುವ ದೀಪಿಕಾ 2022ರಲ್ಲಿ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಗೆದ್ದ ಭಾರತ ತಂಡದಲ್ಲಿದ್ದರು. ರಾಂಚಿಯಲ್ಲಿ 2023ರಲ್ಲಿ ಮತ್ತು 2024ರಲ್ಲಿ ರಾಜಗೀರ್‌ನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಭಾರತ ಚಿನ್ನ ಜಯಿಸಲು ದೀಪಿಕಾ ಪ್ರಮುಖ ಪಾತ್ರ ವಹಿಸಿದ್ದರು. ಜೂನಿಯರ್ ಏಷ್ಯನ್ ಕಪ್‌ನಲ್ಲಿಯೂ ಎರಡು ಬಾರಿ ಬಂಗಾರ ಗೆದ್ದ ತಂಡದಲ್ಲಿಯೂ ಆಡಿದ್ದರು.

ಭಾರತ ತಂಡದಲ್ಲಿ ಅವರು ಒಟ್ಟು 56 ಪಂದ್ಯಗಳನ್ನು ಆಡಿದ್ದಾರೆ. 27 ಗೋಲುಗಳನ್ನು ಗಳಿಸಿದ್ದಾರೆ. ಭವಿಷ್ಯದಲ್ಲಿ ಭಾರತದ ಪ್ರಮುಖ ಫಾರ್ವರ್ಡ್ ಆಟಗಾರ್ತಿಯಾಗಿ ಬೆಳೆಯುವ ನಿರೀಕ್ಷೆ ಮೂಡಿಸಿರುವ ದೀಪಿಕಾ ಸಾಧನೆಯ ಹಾದಿಯಲ್ಲಿ ಮುನ್ನುಗ್ಗುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,

Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65